ಮೇಲೆ ಕುಳಿತುಕೊಂಡೆ. "ಕಂಬಳಿ ಹೊದ್ದುಕೋ. ಇಲ್ಲಾಂದ್ರೆ ಶಾಯಿಲೆ ಬಿದ್ದುಬಿಡುತ್ತೀಯೆ..." ಎಂದರು. ನಾನು ಆಜ್ಞೆಯನ್ನು ಪಾಲಿಸಿದೆ. ಪತ್ರಿಕೆಯನ್ನು ಓದುತ್ತಾ... ಹಾಗೆಯೇ ಎಡಗಡೆಗೆ ಉರುಳಿಕೊಂಡರು. ಪತ್ರಿಕೆ ಜಾರಿ ಸರ... ಸರ... ಎನ್ನುತ್ತ ಕೆಳಗೆ ಬಿತ್ತು. ನಾನು ಉಸಿರು ಬಿಗಿ ಹಿಡಿದು ಕಂಬಳಿಯನ್ನು ಸರಿಸಿ ಮೆಲ್ಲನೆ ಹೆಜ್ಜೆ ಇಡುತ್ತ ಕಿಟಕಿಯ ಹತ್ತಿರ ಹೋಗಿ ನಿಂತೆ.

...ಇಷ್ಟೊಂದು ಮನಸೂರೆಗೈಯುವ ದೃಶ್ಯಾವಳಿಗಳು!...

ಮರ ಗಿಡ, ಪರ್ವತ, ಕಟ್ಟಡಗಳು, ರಸ್ತೆ... ಎಲ್ಲರೂ ಮಂಜಿನಿಂದ ಮಿಂದೆದ್ದು ಹತ್ತಿಯ ಉಂಡೆಯಂತೆ ಕಂಗೊಳಿಸುತ್ತಿದ್ದವು.

ಆಕಾಶದಿಂದ ಪುಷ್ಪಕವಿಮಾನ ನಿಧಾನವಾಗಿ ಕಿಟಕಿಯ ಚೌಕಟ್ಟಿನ ಹತ್ತಿರವೇ ಬರುತ್ತಿದೆ. ಈ ಕೊರೆವ ಚಳಿಯ ಹಿಮದರಾಶಿಯಲ್ಲಿಯೂ ಅಪ್ಸರೆಯರ ದೇಶದ ಆ ರಾಜಕುಮಾರ ಪುಷ್ಪಕ ವಿಮಾನದಲ್ಲಿ ಆಸೀನನಾಗಿದ್ದಾನೆ...

ನಾನು ಉಸಿರು ಬಿಗಿಹಿಡಿದುಕೊಂಡು ಬೆರಗುಗಣ್ಣುಗಳಿಂದ ನೋಡುತ್ತಿದ್ದೇನೆ... ಇಂದು ಆ ರಾಜಕುಮಾರನ ಕೂದಲಿನಿಂದ ಸ್ವರ್ಣಕಿರಣಗಳೇಕೆ ಪ್ರಜ್ವಲಿಸುತ್ತಿಲ್ಲ?... ಆಗ ನಾನು ನನ್ನೆಲ್ಲಾ ಬುದ್ಧಿಮತ್ತೆ, ಪ್ರಜ್ಞೆಯನ್ನು ಒಟ್ಟುಗೂಡಿಸಿ ನೋಡಿದೆ...

ಅರೇ!... ರಾಜಕುಮಾರನ ಹೊಂಬಣ್ಣದ ಕೂದಲು ಹಿಮದಿಂದ ಒದ್ದೆಯಾಗಿ ಇಳಿಬಿದ್ದಿವೆ. ಅಧಿಕಾರವಿಲ್ಲದಿದ್ದರೂ ನಾನು ಕಿಟಕಿಯ ಹೊರಗೆ ಕೈಬಾಚಲು ಪ್ರಯತ್ನಿಸುತ್ತಿರುವಾಗಲೇ ದಢಾರನೆ ಕಿಟಕಿಯ ಗಾಜಿನಬಾಗಿಲು ಮುಚ್ಚಿಕೊಂಡಿತು. ಅವರು ತಮ್ಮ ಬಲಿಷ್ಠ ನೀಳಕೈಗಳಿಂದ ನನ್ನ ಭುಜಗಳನ್ನು ಅಮುಕಿ ಹಿಡಿದಿದ್ದರು. ನನ್ನನ್ನು ನುಂಗಿಬಿಡುವ ಹಾಗೆ ದಿಟ್ಟಿಸುತ್ತ ಹೇಳಿದ್ದರು... "ಅಯ್ಯೋ ಮೂರ್ಖ ಹುಡುಗಿ ನೀನು. ಕೋಣೆಯಲ್ಲಿ ಹೀಟರ್ ಆನ್ ಆಗಿದೆ ಎಂದು ತಿಳಿದಿಲ್ಲವೆ ನಿನಗೆ?" ನನ್ನ ಸ್ವರ ಉಡುಗಿಹೋಗಿತ್ತು. "ಇನ್ನು ಮುಂದೆ ಇಂತಹ ಹುಚ್ಚು ಸಾಹಸ ಮಾಡಬಾರದು. ನನ್ನ ನಿದ್ದೆಯಲ್ಲ ಹಾಳಾಗಿ ಹೋಯಿತು..."

ಅಲ್ಲಾನ ದಯೆ. ಅವರು ಬೇರೆ ಏನನ್ನೂ ನೋಡಲಿಲ್ಲ.

ನಾನು ಮಾಡಿದ ತಪ್ಪಿಗಾಗಿ ನಾನು ನಾಚಿಕೆಗೊಂಡು ಹಾಸಿಗೆಯ ಅಂಚಿನಲ್ಲಿ ಮುದುಡಿ ಮಲಗಿದೆ. ದೇವರೇ... ದೇವರೆ!... ಎನ್ನುತ್ತಾ ಐದು ದಿನಗಳು ಸರಿದುಹೋಗಿ ಮನೆಗೆ ವಾಪಸಾದೆವು.

★★★

ರಾತ್ರಿಯಾಗುತ್ತಲೇ ನನ್ನ ಕನಸಿನ ರಾಜಕುಮಾರ ನಾನು ಕಣ್ಣು ಮುಚ್ಚುವುದನ್ನೇ ಕಾಯುತ್ತಿದ್ದ. ಆದರೆ ಅವರಿಗೆ ನನ್ನ ಕನಸು ಮತ್ತು ಆಸಕ್ತಿಯ ಬಗ್ಗೆ ಅಸಹನೆ ಇದೆ. ನಾನು ಸದಾ ಎಚ್ಚರವಾಗಿರಬೇಕೆಂದು ಅವರು ಯಾವಾಗಲೂ ಒಂದೇ ಮಾತನ್ನು ಹೇಳುತ್ತಿದ್ದರು... "ನೋಡು, ನನ್ನ ಮನೆಯವರೆಲ್ಲರ ಜವಾಬ್ದಾರಿ ನನ್ನ ಮೇಲೆಯೇ ಇದೆ. ಹಾಗೇನೇ ನಿನ್ನ ಜವಾಬ್ದಾರಿ ಕೂಡ. ಅವರಿಗೆ ಸ್ವಲ್ಪವೇ ತೊಂದರೆಯಾದರೂ ನಾನು ನಿನ್ನನ್ನು ಕ್ಷಮಿಸುವುದಿಲ್ಲ..." ನಾನು ಅವರನ್ನು ನೋಡದೇ ಅವರ ಮಾತಿಗೆ ಸಮ್ಮತಿ ಸೂಚಿಸುತ್ತೇನೆ. ಆಗ ಅವರು ನೆಮ್ಮದಿಯಿಂದ ನನ್ನ ಕಡೆಗೆ ಬೆನ್ನು ತಿರುಗಿಸಿ ಮಲಗಿಬಿಡುತ್ತಾರೆ. ಅವರ ಭಯಾನಕವಾದ ಗೊರಕೆ ಶಬ್ದ ನನ್ನ ಕನಸುಗಳಿಗೆ ಗೋಡೆಯಾಗಿ ಅಡ್ಡ ನಿಂತುಬಿಡುತ್ತದೆ.

ಕಾಲ ತನ್ನದೇ ಆದ ವೇಗದಲ್ಲಿ ಮುಂದುವರೆಯುತ್ತದೆ. ನಾನು ಎರಡು ಮುದ್ದಾದ ಮಕ್ಕಳ ತಾಯಿ. ಈಗ ಅವರ ಸಂತೋಷ, ಭವಿಷ್ಯವೇ ನನ್ನ ಬದುಕಿನ ಗುರಿಯಾಯಿತು. ಈಗಂತೂ ಆ ಅಪ್ಸರೆಯರ ದೇಶದ ರಾಜಕುಮಾರ ಕೂಡ ಈಗೊಮ್ಮೆ ಆಗೊಮ್ಮೆ ಬರುತ್ತಾನೆ. ಒಳ್ಳೆಯದೇ ಆಯಿತು. ಆತನೂ ನೆಮ್ಮದಿಯಾಗಿ ಇರಬಹುದು.